

ಧುಮ್ಮಿಕ್ಕುವ ಜಲಪಾತಗಳ ಸಮೀಪನೋಟ



ಇಗ್ವಾಸು ಹಾದಿಯಲ್ಲಿ ದರ್ಶನ ಕೊಡುವ ವನಚರಿಗಳು

ಮರ್ಮೊಸೆಟ್ ಮಂಗ, ಉಡದಂತಹ ಹಲ್ಲಿ, ಮುಂಗುಸಿ, ವಿವಿಧ ಹಕ್ಕಿಗಳು, ಬಣ್ಣಬಣ್ಣದ ಚಿಟ್ಟೆಗಳು, ಬೃಹತ್ ಗಾತ್ರದ ಮರಗಳು ಇಗ್ವಾಸು ರಾಷ್ಟ್ರೀಯ ಉದ್ಯಾನದಲ್ಲಿವೆ. ಹಸುರು ಉಕ್ಕುವಂತಿರುವ ಕಾಡನ್ನು ನೋಡಿದರೆ, ಜಲಪಾತದಂತೆಯೇ ನಿಸರ್ಗ ಸೌಂದರ್ಯದ ಹಸುರೂ ಧುಮ್ಮಿಕ್ಕಿದಂತೆ ಭಾಸವಾಗುತ್ತದೆ.

## ದೋಣಿಯಲ್ಲಿ ಜಲಪಾತ ವೀಕ್ಷಣೆ

ಗಾಳಿ ತುಂಬಿರುವ ರಬ್ಬರ್ ದೋಣಿಯಲ್ಲಿ ಲೈಫ್ ಜಾಕೆಟ್ ತೊಡಿಸಿ, ಒಮ್ಮೆಗೆ 10–12 ಜನರನ್ನು ಕೂರಿಸಿಕೊಂಡು ಜಲಪಾತದ ಹತ್ತಿರದವರೆಗೂ ಕರೆದೊಯ್ಯುತ್ತಾರೆ. ಸುತ್ತಲೂ ಜಲಪಾತ, ಮಧ್ಯೆ ತೊಯ್ದಾಡುವ ದೋಣಿ. ಮಳೆ ಬಿದ್ದಂತೆ ನೀರಿನ ಸಿಂಚನ. ಭೋರ್ಗರೆವ ಜಲಧಾರೆಯ ರೌದ್ರತೆ, ವೈಭವ. ಎದೆಯಲ್ಲಿ ಒನಕೆ ಕುಟ್ಟುತ್ತಿರುವ ಭಾವ, ಶಬ್ದ, ನೀರಿನ ರಭಸ ಬಣ್ಣನೆಗೆ ನಿಲುಕದ್ದು. ಒಂದು ಸೆಕೆಂಡಿಗೆ 62,000 ಕ್ಯೂಬಿಕ್ ಅಡಿಗಳಷ್ಟು ನೀರು ಇಗ್ವಾಸು ಜಲಪಾತದಲ್ಲಿ ಧುಮುಕುತ್ತದೆ. ಜಲಪಾತದ ಹತ್ತಿರ ಹೋದಂತೆ ತಲೆಯೆತ್ತಿದರೆ ಸಾಕು, ಧುಮುಕುವ ನೀರು ಮೈ ಜುಮ್ಮೆನಿಸುತ್ತದೆ.

ಪ್ರತಿಕ್ರಿಯಿಸಿ: **feedback@sudha.co.in**

